ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

www.raichuruniversity.ac.in **ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ**registrarrur@gmail.com

**ಆಡಳಿತ ವಿಭಾಗ**

ಸಂ: ರಾವಿರಾ/ಆಡಳಿತ/ಅಉ/2023-24/ ದಿನಾಂಕ: 07.03.2024

## ಅಧಿಸೂಚನೆ

ವಿಷಯ: 2023-24ನೇ ಸಾಲಿನ ಉರ್ದು ವಿಭಾಗದ ಬೋಧನಾ ಕಾರ್ಯದ ನಿರ್ವಹಣೆಗೆ ಅತಿಥಿ ಉಪನ್ಯಾಸಕರ ಹುದ್ದೆಗಳ ನೇಮಕಾತಿಗಾಗಿ ನೇರ ಸಂದರ್ಶನ (Walk-in-Interview) ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.03.2024.

*****

2023-24ನೇ ಶೈಕ್ಷಣಿಕ ಸಾಲಿನ ರಾಯಚೂರು ವಿಶ್ವವಿದ್ಯಾಲಯದ **ಉರ್ದು ಅಧ್ಯಯನ ವಿಭಾಗದ** ಬೋಧನಾ ಕಾರ್ಯದ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ದಿನಾಂಕ: 13.03.2024 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ನೇರ ಸಂದರ್ಶನ (Walk-in-Interview) ಹಮ್ಮಿಕೊಳ್ಳಲು ನಿರ್ಧರಿಸಿದ್ದು, ಇಚ್ಛೆಯುಳ್ಳ ಉರ್ದು ವಿಷಯದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಪಿಹೆಚ್.ಡಿ/ನೆಟ್/ಕೆ-ಸೆಟ್/ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಮೇಲಿನ ದಿನಾಂಕದಂದು ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

ನೇರ ಸಂದರ್ಶನಕ್ಕೆ ಹಾಜರಾಗಲು ಬಯಸುವ ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ತಮ್ಮ ಬಯೋಡಾಟಾ, ವಿದ್ಯಾರ್ಹತೆಯ ದಾಖಲೆಗಳ ಮೂಲ ಪ್ರತಿಗಳು ಮತ್ತು ಅವುಗಳ ಒಂದು ಸೆಟ್ ಝುರಾಕ್ಸ್ ಪ್ರತಿಯೊಂದಿಗೆ ದಿನಾಂಕ: 13.03.2024 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ನೇರ ಸಂದರ್ಶನ (Walk-in-Interview)ಕ್ಕೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಹಾಜರಾಗಲು ಸೂಚಿಸಲಾಗಿದೆ. ಉರ್ದು ಅಧ್ಯಯನ ವಿಭಾಗದ ಭೋದನಾ ಕಾರ್ಯಭಾರದ ವಿವರವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ (Website) ಪ್ರಕಟಿಸಲಾಗಿದೆ. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ಪ್ರಯಾಣ ಭತೆಯನ್ನು ನೀಡಲಾಗುವುದಿಲ್ಲ.

(ಪ್ರೊ. ವಿಶ್ವನಾಥ ಎಂ.,)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿ:

1. ಅಧ್ಯಕ್ಷರು, ಉರ್ದು ಅಧ್ಯಯನ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮಾಹಿತಿಗಾಗಿ.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮಾಹಿತಿಗಾಗಿ.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮಾಹಿತಿಗಾಗಿ.
4. ಕಚೇರಿ ಪ್ರತಿ.